*ಎಸ್.ಜಿ.ಆರ್. ರೆಡ್ಡಿ, ಗೌರಿಬಿದನೂರು*
*ನಮ್ಮಿಬ್ಬರನ್ನು ಬಿಟ್ಟು ಜನರಲ್ಲಿ ದಡ್ಡರು/ಜಾಣರನ್ನು ಗುರುತಿಸುವುದು ಹೇಗೆ?*



ಬಹಳ ಸುಲಭ; ಭವಿಷ್ಯದ ಬಗ್ಗೆ ಪ್ರಶ್ನೆ ಕೇಳುವವರು ಜಾಣರು, ಭವಿಷ್ಯದವನ ಬಳಿ ಪ್ರಶ್ನೆ ಕೇಳುವವರು ದಡ್ಡರು!

*ಸಾರಂಗ್, ಬೆಂಗಳೂರು*
*ಗಾಂಧೀಜಿಯ ಉಪವಾಸಕ್ಕೂ, ಬಾಬಾ ರಾಮ್‌ದೇವ್‌ರ ಉಪವಾಸಕ್ಕೂ ಏನು ವ್ಯತ್ಯಾಸ?*
ಅವರ ಸತ್ಯಾಗ್ರಹ ಲಂಡನ್ ವಿರುದ್ಧ, ಇವರದು ಲಂಡರ ವಿರುದ್ಧ!

*ಗಾಯತ್ರಿ, ರಾಜಾಜಿನಗರ*
*ಪ್ರೇಮಿಗಳು ಮಾತನಾಡುವಷ್ಟು ಗಂಡ ಹೆಂಡತಿ ಮಾತನಾಡುವುದಿಲ್ಲವೇಕೆ?*
ಮಗು ಎದ್ದುಬಿಡುತ್ತದೆಂಬ ಭಯ!

*ಗೀತಾ ಬರ್ಲ, ಬೆಂಗಳೂರು*
*ಹೆಣ್ಣಿಗೆ ಸೌಂದರ್ಯ ಮುಖ್ಯವಂತೆ; ಗಂಡಿಗೆ?*
ಸುಂದರಿ!

*ಮಹಾವೀರ ಕಾಸಾರ, ಚನ್ನಗಿರಿ*
*ಭವಿಷ್ಯ ಹೇಳುವವರು ಗಂಡಸರ ಬಲಗೈ ನೋಡುತ್ತಾರೆ; ಆದರೆ ಹೆಂಗಸರ ಎಡಗೈ ನೋಡುವುದೇಕೆ?*




ಅವರಲ್ಲಿ ಹಂ'ಬಲ' ಜಾಸ್ತಿ, ಇವರದು 'ಎಡ'ವಟ್ಟು ಜಾಸ್ತಿಯಾದ್ದರಿಂದ!

*ಎಂ.ಎಸ್.ಗುರುರಾಜಾಚಾರು, ಬಳ್ಳಾರಿ*
*ಗಂಡಸರಿಗೆ ಹೆಣ್ಣಿನ ಹೆರಿಗೆ ನೋವು ಕೂಡ ಅನುಭವಿಸುವ ಹಾಗಿದ್ದಿದ್ದರೆ?*
ಧೃತರಾಷ್ಟ್ರ ಹೆರಿಗೆನೋವು ಶತಕಂ ಎಂಬ ಪುಸ್ತಕ ರಚಿಸುತ್ತಿದ್ದ!

*ನಾರಾಯಣ, ಗುಗ್ಗರಹಟ್ಟಿ*
*ಗಂಡು ರಾಷ್ಟ್ರಪತಿಯಾದರೆ ಹೆಣ್ಣು ರಾಷ್ಟ್ರಮಾತೆಯಲ್ಲವೆ?*
ಊಹೂಂ! ಹೈಕಮಾಂಡ್ ರಾಷ್ಟ್ರಮಾತೆ, ಈಕೆ ಮಾತೇ ಇಲ್ಲದ ಮಾತೆ!

*ಎಚ್.ಎನ್. ವಿಶ್ವನಾಥ್, ಶಿವಮೊಗ್ಗ*
*ದೇವರು ಇದ್ದಾನೆನ್ನುವವರಿದ್ದಾರೆ, ಇಲ್ಲವೆನ್ನುವವರಿದ್ದಾರೆ, ನಿಮ್ಮೊಳಗೇ ದೇವರು ಇದ್ದಾನೆನ್ನುವವರಿದ್ದಾರೆ, ನೀವೇನೆನ್ನುತ್ತೀರಿ?*
ನಿಮ್ಮಾಣೆಯಾಗಿಯೂ, ದೇವರಾಣೆಯಾಗಿಯೂ ದೇವರಿಲ್ಲ ಎನ್ನುತ್ತೇನೆ!

*ಎಚ್.ಆರ್. ಕೌಶಿಕ್‌ರಾಜ್, ಹನುಮನಾಳು*
*ಕತ್ತೆಯ ಹಿಂದೆ ನಿಲ್ಲಬಾರದು, ಬಸ್ಸಿನ ಮುಂದೆ ನಿಲ್ಲಬಾರದು, ಹುಡುಗಿಯ ...?*
ಮುಂದೆ ಮಾತು ಬಾರದು!

*ಡಿ.ಎಸ್. ಪಂಕಜಸುಬ್ರಮಣ್ಯ, ಬೆಂಗಳೂರು*
*ಕೆಲವು ಹೆಂಗಸರು ತಮ್ಮ ಗಂಡನನ್ನು ಕಂಡರೆ ಸಿಡಿಮಿಡಿಗೊಳ್ಳುವುದೇಕೆ?*
ತಮಗೆ ಬೇಕಾದಂತೆ ಮಿಡಿದಿಲ್ಲವೆಂದು!

*ವಿ. ಹಮೀದ್, ವಿಟ್ಲ*
*ಹಿಂದಿನ ಕಾಲದಲ್ಲಿ ಪತಿಯೇ ದೇವರು. ಈಗ?*
ದೇವನಂತೆ ಮಾತಿಲ್ಲದೆ ಕುಳಿತವನೇ ಪತಿ!

*ಅಭಿಷೇಕ್ ಆರ್. ರೆಡ್ಡಿ, ಗೌರಿಬಿದನೂರು*
*ನಮ್ಮ ಸಿಲಬಸ್‌ನಲ್ಲಿ ವಾಸ್ತು, ಜ್ಯೋತಿಷ್ಯ ಇತ್ಯಾದಿಗಳು ಇಲ್ಲವಲ್ಲ ಮೇಷ್ಟ್ರೇ...?*
ವಾಸ್ತು ಪ್ರಕಾರ ಯಾವ ಪುಟದಲ್ಲಿರಬೇಕೆಂದು ಜ್ಯೋತಿಷಿಗಳು ಇನ್ನೂ ಹೇಳಿಲ್ಲವಂತೆ!

*ಪಿ. ನಾಗೇಂದ್ರಪ್ಪ, ಬೆಂಗಳೂರು*
*ಆಕ್ರಮಿತ ಕಾಶ್ಮೀರವನ್ನು ವಶಪಡಿಸಿಕೊಳ್ಳಲು ಭಾರತಕ್ಕೆ ಧೈರ್ಯವಿಲ್ಲವೆ?*
ಸೇನೆಗೆ ಧೈರ್ಯವಿದೆ; ಆದರೆ ಆದೇಶ ನೀಡುವರಿಗೆ ಈ ದೇಶದ ಕಾಳಜಿ ಇಲ್ಲ!

*ಎಚ್.ಸಿ. ಭಾಗ್ಯಕುಮಾರ್, ಬೆಂಗಳೂರು*
*ನಮ್ಮ ಭಾರತೀಯರು ಎಲ್ಲಾ ಬಿಟ್ಟು ಸೊನ್ನೆಯನ್ನೇಕೆ ಕಂಡುಹಿಡಿದರು?*
ಬೇಕಾದ ಜಾಗದಲ್ಲಿ ಉರುಳಿಸಬಹುದೆಂದು!

*ಬಸವರಾಜ ಜಿ. ಸಂತನಗೌಡರ, ಓಜಿನಹಳ್ಳಿ*
***live together*** *ಇದನ್ನು ಹೇಗೆ ಓದಬಹುದೆಂದು ಹೇಳ್ತೀರಾ ಪ್ಲೀಸ್?*
ಲಿವ್ ಟು ಗೆಟ್ ಹರ್ ಎಂದು!

## ಬಹುಮಾನಿತ ಪ್ರಶ್ನೆ

*ಮಹೇಂದ್ರಕುಮಾರ್ ಉಪ್ಪುಂದ, ಕುಂದಾಪುರ*
*ಈಗಿನ ಹುಡುಗಿಯರಿಗೆ ಸಹಿಸಲು ಸಾಧ್ಯವಾಗದ ವಿಚಾರ ಯಾವುದು?*
ಈಗಿನ ಅವರಿಗಿಂತಲೂ ಚೆನ್ನಾಗಿರುವ ಹುಡುಗಿಯರು!

*ಬಿ.ಎಂ. ಪರಶಿವಮೂರ್ತಿ, ಬೆಂಗಳೂರು*
*ಬಾಲ್ಯದಲ್ಲಿ ಬೊಂಬೆಗಳೊಡನೆ ಚೆಲ್ಲಾಟ, ಯೌವನದಲ್ಲಿ ಮಡದಿಯೊಡನೆ ಮುದ್ದಾಟ, ವಯಸ್ಸಾದ ಮೇಲೆ?*
ಮೊಮ್ಮಕ್ಕಳೊಡನೆ ಮೊದ್ದಾಟ!

*ಮಾಲತಿರಾಜು, ಬೆಂಗಳೂರು*
*ರಾಮ್‌ಜೀ, ಪ್ರಶ್ನೆ ಕೇಳಿ ನಿಮ್ಮ ಉತ್ತರಕ್ಕಾಗಿ ವರ್ಷಾನುಗಟ್ಟಲೆ ಕಾಯಬೇಕಲ್ಲಾ...?*
ನೀವು ದೀರ್ಘಾಯುಷಿಗಳಾಗಿರಲೆಂದು ನಾವು ಹಮ್ಮಿಕೊಂಡಿರುವ ಉಪಾಯವಿದು!

*ರವಿ ಮಂಜುನಾಥ ಪೈ, ಹೊನ್ನಾವರ*
*ಬಂಧು ಹಾಗೂ ಸ್ನೇಹಿತ; ಯಾರು ಹಿತವರು ಈ ಇಬ್ಬರೊಳಗೆ?*
'ನಿನ್ನ ಸ್ನೇಹಿತನೇ ನಿನಗೆ ಮೋಸ ಮಾಡಿದನೆ' ಹಾಗಿದ್ದರೆ ಅವನನ್ನು ಬಂಧುವೆಂದು ತಿಳಿದುಬಿಡು? ಎನ್ನುತ್ತಾರೆ ಬೀಚಿ!

*ಪಿ.ಎಸ್. ಶ್ರೀವತ್ಸ, ಬೆಂಗಳೂರು*
*ಹೆಂಗಸರಿಗೆ ಉದ್ದ ಕೂದಲಿದ್ದಷ್ಟೂ ಗಂಡಸಿಗೆ ಶ್ರೇಯಸ್ಸಲ್ಲ ಎಂಬುದು ನಿಜವೇ?*
ನಿಜ; ಉಪ್ಪಿಟ್ಟಿನಲ್ಲಿ ಉದ್ದುದ್ದ ಕೂದಲು ಹೆಕ್ಕಬೇಕಾಗುತ್ತದಲ್ಲ!

*ದೇಶವಳ್ಳಿ ಶಿವು, ಸಂತೇಮರಹಳ್ಳಿ*
*ಮನುಜನ ಆಸೆಯ ದೂರ ಸುಮಾರು ಎಷ್ಟು ಮೈಲಿಗಳಿರಬಹುದು...?*




ಇಲ್ಲೇ, ಇನ್ನೇನು ಕೈಗೇ ಸಿಕ್ಕಿತು ಎನ್ನುವಷ್ಟು ಹತ್ತಿರದಲ್ಲಿರುವ ದಿಗಂತದಷ್ಟೇ ದೂರ!

■ ರಾಮ್